


## ಹೂಣಲ್ಪಟ್ಟ ಬಾತುಕೋಳಿ

ಬಹು ಐಶ್ವರ್ಯವುಳ್ಳ ವ್ಯಕ್ತಿಯೊಬ್ಬನು ದೇವರಿಗೆ ಹೆದರುತ್ತಾ ನೀತಿ ವಂತನಾಗಿ ಬಾಳುತ್ತಿದ್ದನು. ತನ್ನ ಒಬ್ಬನೇ ಮಗನನ್ನು ಕೂಡ ಹಾಗೆಯೇ ಸಾಕುತ್ತಾ ಬಂದನು. ಮಗನಿಗೆ ಶಾಲೆಯ ರಜೆ ಬಂದಾಗ ಅವನನ್ನು ತನ್ನ ಗ್ರಾಮದಲ್ಲಿನ ಮನೆಗೆ ತನ್ನ ರಜೆ ದಿನಗಳನ್ನು ಕಳೆಯಲು ಕರಕೊಂಡು ಹೋದನು. ಪಟ್ಟಣದಲ್ಲಿ ಇದ್ದು ಬಂದಂತ ಚಿಕ್ಕ ಹುಡುಗನಿಗೆ ಗ್ರಾಮದ ಮನೆಯನ್ನು ಅಲ್ಲಿದ್ದಂತ ಸಾಕು ಪ್ರಾಣಿಗಳನ್ನು ಕಂಡು ಬಹು ಸಂತೋಷವಾಯಿತು.

ಅಲ್ಲಿರುವ ಸಾಕುಪ್ರಾಣಿಪಕ್ಷಿಗಳೊಂದಿಗೆ ಆಟವಾಡುತ್ತಾ ಸಮಯವನ್ನು ಕಳೆಯುತ್ತಿದ್ದನು. ಒಂದು ದಿನ ಅಲ್ಲಿದ್ದಂತ ಬಾತುಕೋಳಿಗಳೊಂದಿಗೆ ಆಟವಾಡುತ್ತಿರುವಾಗ ಒಂದು ಬಾತುಕೋಳಿಯ ಕತ್ತನ್ನು ಗಟ್ಟಿಯಾಗಿ ಇಡಿದು ಎತ್ತಿದರ ನಿಮಿತ ಆ ಬಾತುಕೋಳಿ ಸತ್ತು ಹೋಯಿತು. ಇದನ್ನು ನೋಡಿದ ಆ ಹುಡುಗನಿಗೆ ಭಯ ಹಿಡಿಯಿತು.

ಅಪ್ಪನಿಗೆ ತಿಳಿದು ಬಂದರೆ ನನ್ನನ್ನು ದಂಡಿಸಿಬಿಡುವರು, ಇನ್ನು ಮುಂದೆ ಇಂತ ಸ್ಥಳಕ್ಕೆ ನನ್ನನ್ನು ಎಂದಿಗೂ ಆತ ಕರಕೊಂಡು ಬರುವದಿಲ್ಲ ಎಂದು ಯೋಚಿಸಿದನು. ಅಕ್ಕಪಕ್ಕ ನೋಡಿದನು ಆಗ ಯಾರು ಆತನ ಕಣ್ಣಿಗೆ ಕಾಣಲ್ಪಡಲಿಲ್ಲ. ತನ್ನ ಬಾತುಕೋಳಿಯನ್ನು ಸಾಯಿಸಿದ್ದನ್ನು ಯಾರು ಕಂಡಿಲ್ಲ ಎಂದು ತಿಳಿಕೊಂಡು ಅವಸರ ಅವಸರವಾಗಿ ಮಣ್ಣಿನಲ್ಲಿ ಒಂದು ಗುಂಡಿಯನ್ನು ತೋಡಿ ಆ ಬಾತುಕೋಳಿಯನ್ನು ಹೂಣಿಟ್ಟನು.

ಆದರೆ ಇವನು ಮಾಡಿದ ತಪ್ಪು ಕಾರ್ಯವನ್ನು ಅಡಿಗೆ ಮನೆಯಿಂದ ಅಡುಗೆ ಮಾಡುವವನು ನೋಡಿಬಿಟ್ಟನು. ಈ ಹುಡುಗನು ಮಧ್ಯಾಹ್ನದಲ್ಲಿ ಅಡುಗೆ ಮನೆಗೆ ಬಂದಾಗ ಅಲ್ಲಿದ್ದಂತ ಎಲ್ಲಾ ಕೊಳೆ ಪಾತ್ರೆಗಳನ್ನು ತೊಳೆ ಯುವಂತೆ ಆಜ್ಞೆ ಮಾಡಿದನು. ಅದಕ್ಕೆ ಆ ಹುಡುಗನು, "ನಾನೇಕೆ ನಿನ್ನ ಕೆಲ ಸವನ್ನು ಮಾಡಬೇಕು, ಅದು ನಿನ್ನ ಕೆಲಸತಾನೆ?" ಎಂದು ಗದರಿಸಿದನು, ನೀನು ಬಾತುಕೋಳಿಯನ್ನು ಸಾಯಿಸಿ ಅದನ್ನು ಹೂಣಿಟ್ಟದ್ದನ್ನು ನಾನು ನೋಡಿದೆನು. ನಿನ್ನ ತಂದೆಗೆ ನಾನು ಹೇಳಿಬಿಡುತ್ತೇನೆ. ನಾನು ನಿನ್ನ ತಂದೆಯ ಬಳಿ ಹೇಳಬಾರದೆಂದರೆ ನೀನು ನನಗಾಗಿ ನಾನು ಹೇಳುವ ಕೆಸವನ್ನೆಲ್ಲಾ ಮಾಡಬೇಕು ಎಂದು ಗದರಿಸಿ ಒಂದೊಂದು ದಿನವು ಹೆಚ್ಚು ಹೆಚ್ಚು ಕೆಲಸವನ್ನು ಮಾಡಿಸುತ್ತಲೇ ಇದ್ದನು.

ಈ ಹುಡುಗನು ಕೆಲಸಮಾಡಿ ಅಭ್ಯಾಸವಿಲ್ಲದರಿಂದಲೂ ಭಯವಿದ್ದದರಿಂದಲೂ ತನ್ನ ಮನಸಂತೋಷವನ್ನು ಕಳಕೊಳ್ಳುತ್ತಿದ್ದನು. ಗ್ರಾಮದ ಮನೆಯಲ್ಲಿ ಚೆನ್ನಾಗಿ ಆಟವಾಡುತ್ತಿದ್ದ ತನ್ನ ಮಗನು ಈಗ ಸಪ್ಪಗೆ ಇರುವದನ್ನು, ಬೇಸರದಿಂದ ಇರುವದನ್ನು ಅವನ ತಂದೆ ಕಂಡು ತನ್ನ ಮಗನನ್ನು ಕರೆದು ಅವನನ್ನು ಬಹು ತಾಳ್ಮೆಯಿಂದ ವಿಚಾರಿಸಿದನು.

ಇಷ್ಟು ದಿನ ತನ್ನ ತಪ್ಪನ್ನು ಮರೆಸಿ ಬರುತ್ತಿದ್ದ ಆ ಹುಡುಗನು ಅಡುಗೆ ಕೆಲಸದವನ ಬಳಿ ಕಷ್ಟ ಪಡುವದಕ್ಕಿಂತ ತನ್ನ ತಂದೆಯ ಬಳಿ ತಪ್ಪನ್ನು ಒಪ್ಪಿಕೊಳ್ಳುವಂತದ್ದು ಎಷ್ಟೋ ಮೇಲು ಎಂದು ತನ್ನ ಎಲ್ಲಾ ತಪ್ಪನ್ನು ಬಹು ಕಣ್ಣೀರಿನಿಂದ ಹೇಳಿ ಒಪ್ಪಿಕೊಂಡನು.ಆಗ ಆತನ ತಂದೆ ಅದನ್ನು ದೊಡ್ಡದಾಗಿ ಕಾಣದೆ ತನ್ನ ಮಗನನ್ನು ಸಂಪೂರ್ಣವಾಗಿ ಮನ್ನಿಸಿಬಿಟ್ಟನು.

ಯಥಾಪ್ರಕಾರ ಅಡುಗೆ ಕೆಲಸಗಾರನು ಆ ಹುಡುಗನನ್ನು ಕೆಲಸಮಾಡಲು ಹೇಳಿದಾಗ, "ಹ್ಮ್ ಹುಂ. ಇನ್ನು ಮೇಲೆ ನನ್ನಿಂದ ಮಾಡಲು ಸಾಧ್ಯವೆ ಇಲ್ಲ, ಎಂದು ಹೇಳಲು, ತಕ್ಷಣ ಆ ಅಡುಗೆ ಕೆಲಸಗಾರನು ಬಾ ಇಂದು ನಿನ್ನ ತಂದೆಗೆ ಎಂದು ಬಾಯನ್ನು ತೆರೆದ ತಕ್ಷಣ" "ಹುಂ..ಹುಂ ಅಪ್ಪನಿಗೆ ಬಾತುಕೋಳಿ ಸತ್ತಂದ್ದನ್ನು ನಾನೇ ಹೇಳಿಬಿಟ್ಟೆನು. ಇನ್ನು ಮೇಲೆ ನಿನಗೆ ನಾನು ಅಧೀನನಾಗಬೇಕಾದ ಅವಶ್ಯವಿಲ್ಲ," ಎಂದು ಹೇಳಿ ಬಹು ಸಂತೋಷದಿಂದ ಗ್ರಾಮದ ತೋಟಕ್ಕೆ ಆಟವಾಡಲು ಹೊರಟನು.

ಈ ಕರಪತ್ರವನ್ನು ಓದುವ ನನ್ನ ಪ್ರಿಯ ಸಹೋದರರೆ,ಇಂದು ಒಂದು ವೇಳೆ ನೀವು ಕೂಡ ಆ ಹುಡುಗನಂತೆ ಪಾಪ ಮಾಡಿ ಮನಸ್ಸಿನ ನೆಮ್ಮದಿಯಿಲ್ಲದೆ ಇರಬಹುದು.

ದುಷ್ಟನಿಗೆ ಸಮಾಧಾನವಿಲ್ಲವೆಂದು ವಾಕ್ಯ ತಿಳಿಸುತ್ತದೆ. ಪಾಪ ಮಾಡುವಾಗ ನಾವು ಸೈತಾನನಿಗೆ ಅಧೀನರಾಗಿಬಿಡುತ್ತೇವೆ. ಪಾಪಮಾಡುವ ಪ್ರತಿಯೊಬ್ಬನು ಸಾಯಲೇಬೇಕು. ಪಾಪ ಹೃದಯದಲ್ಲಿ ಇರುವಾಗ ಅದು ನಮ್ಮ ಜೀವಿತವನ್ನು ನಾಶ ಪಡಿಸಿಬಿಡುತ್ತದೆ. ಆ ಹುಡುಗನಂತೆ ನಾವು ನಮ್ಮ ಪಾಪಗಳನ್ನು ನಮ್ಮ ತಂದೆಯಾದ ಯೇಸುಕ್ರಿಸ್ತನ ಬಳಿ ಅರಿಕೆ ಮಾಡಿ ಬಿಟ್ಟುಬಿಡಲು ತೀರ್ಮಾನಿಸುವಾಗ ದೇವರ ಕರುಣೆ ನಮಗೆ ದೊರೆಯುತ್ತದೆ.

*ಯೇಸು ಕ್ರಿಸ್ತನ ರಕ್ತವು ಸಕಲ ಪಾಪವನ್ನು ನಿವಾರಣೆ ಮಾಡಿ ನಮ್ಮನ್ನು ಶುದ್ಧೀ ಮಾಡುತ್ತದೆ. (1ಯೋಹಾನ 1:7)*

ನಮ್ಮ ಪಾಪಗಳನ್ನು ಕ್ಷಮಿಸಲು ಯೇಸು ಬಹುದಯೆಯುಳ್ಳವನಾಗಿದ್ದಾನೆ. ನಿಮ್ಮ ಪಾಪಗಳನ್ನು ಇಂದೆ ಆತನಿಗೆ ಅರಿಕೆ ಮಾಡಿಬಿಡಿರಿ.ಯೇಸು ಕ್ರಿಸ್ತನು ನಿಮ್ಮ ಪಾಪಗಳನ್ನು ಕ್ಷಮಿಸಿ, ಪ್ರೀತಿಯಿಂದ ಅಂಗಿಕರಿಸಿಕೊಳ್ಳುವನು. ಆತನಿಂದ ಕರುಣೆಯನ್ನು ಕೃಪೆಯನ್ನು ಇಂದೇ ಹೊಂದಿಕೊಳ್ಳಿರಿ.

*ದೋಷಗಳನ್ನು ಮುಚ್ಚಿಕೊಳ್ಳುವವನಿಗೆ ಶುಭವಾಗದು; ಅವುಗಳನ್ನು ಒಪ್ಪಿಕೊಂಡು ಬಿಟ್ಟುಬಿಡುವವನಿಗೆ ಕರುಣೆ ದೊರೆಯುವದು.*
*(ಜ್ಞಾನೋ 28:13)*

ಈ ಪತ್ರಿಕೆಯ ಮೂಲಕ ನೀವು ಯೇಸು ಕ್ರಿಸ್ತನನ್ನು ಅಂಗೀಕರಿಸಿ ಕೊಂಡಿದ್ದೇ: ಆದರೆ ಆತನ ಬಗ್ಗೆ ಇನ್ನೂ ತಿಳಿಯಲು ಇಚ್ಚಿಸಿ ಪುಸ್ತಕ ಮತ್ತು ಸಿ.ಡಿಗಳನ್ನು ಪಡೆಯಲು ನಮ್ಮ ಈ ಕೆಳಕಂಡ ವಿಳಾಸಕ್ಕೆ ಸಂಪರ್ಕಿಸಿ.


**VOICE OF JESUS PUBLICATIONS**
P.O.Box:6,Ramanathapuram.623501. S.India.
Phone: 98941 31211- 94423 22264
Email: vojpulication@gmail.com

**VOICE OF JESUS MEDIA**
P.O.Box:7206,Bangalore- 560 072. Ph: 9731722977
Email: vojmedia@gmail.com


ಈ ಕರಪತ್ರಿಕೆಯನ್ನು ಉಚಿತವಾಗಿ ನೀಡಲಾಗುತ್ತದೆ ಮಾರಾಟ ಮಾಡುವುದಿಲ್ಲ

VOJ TRACTS/2013/KANNADA